ಎಂ ವಿ ಸಿ ನಂ. 497/2019
ಪಿ ಡಬ್ಲ್ಯೂ: 1
ದಿನಾಂಕ 05/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುದುವರೆದ ಪಾಟೀ ಸವಾಲು: ಎದುರುದಾರರ ಪರ: ಶ್ರೀ ಎಂ ಎನ್ ವಕೀಲರಿಂದ:</u>

ಅಪಘಾತದ ಸಂಬಂದ ನಾನು ಚಿಕ್ಕಮಗಳೂರಿನಲ್ಲಿ ಚಿಕಿತ್ಸೆ ಪಡೆದಿದ್ದನ್ನು ಹೊರತು ಪಡಿಸಿ ಬೇರೆ ಎಲ್ಲಿಯೂ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿ ನಾನು ಕಡೂರು ಮತ್ತು ಸಿಂಗಟಗೆರೆ ಎರಡೂ ಕಡೆ ಚಿಕಿತ್ಸೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಚಿಕ್ಕಮಗಳೂರಿನಲ್ಲಿ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಎಡಗಾಲಿಗೆ ಸಿಮೆಂಟ್ ಕಟ್ಟಿದ್ದರು ಎಂದು ನುಡಿಯುತ್ತಾರೆ. ನಾನು ಕಡೂರು ಮತ್ತು ಸಿಂಗಟರೆಗೆಯ ಸರ್ಕಾರಿ ವೈದ್ಯರ ಬಳಿ ಚಿಕಿತ್ಸೆ ಪಡೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಚಿಕ್ಕಮಗಳೂರಿನಲ್ಲಿ ಚೀಟಿ ಬರೆದುಕೊಟ್ಟರೆ ಅಲ್ಲಿ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದೆ, ಕಡೂರು ಸಿಂಗಟರೆಗೆಯಲ್ಲೂ ಸಹ ಅದೇರೀತಿ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವುದರಿಂದ ಚಿಕಿತ್ಸೆ ಸಂಪೂರ್ಣವಾಗಿ ಉಚಿತವಾಗಿರುತ್ತದೆ ಎಂದರೆ ಸಾಕ್ಷಿ ಔಷಧಿಗಳನ್ನು ತರಲು ಚೀಟಿ ಬರೆದುಕೊಡುತ್ತಿದ್ದರು ನಾನು ಹೊರಗಡೆ ಔಷಧಿಗಳನ್ನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-9 ರಿಂದ 14 ರ ಮೆಡಿಕಲ್ ಬಿಲ್ಲುಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರಿಂದ 14 ರ ಬಿಲ್ಲುಗಳನ್ನು ನೀಡಿರುವ ಸಿಂಗಟಗೆರೆ ಶ್ರೀ ಕಲ್ಲೇಶ್ವರ ಮೆಡಿಕಲ್ ಶಾಪ್ ನವರು ನನಗೆ ಎಷ್ಟು ವರ್ಷಗಳಿಂದ

ಪರಿಚಯ ಎಂದರೆ ಸಾಕ್ಷಿ ನನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ಯಲ್ಲಪ್ಪರವರಿಂದ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.